# KARNATAK UNIVERSITY, DHARWAD

## Brief Report of action taken on the resolutions of the Special Syndicate held on 13th June, 2023

| ಕಲಂ. ನಂ. | ವಿಷಯ | ವಿಭಾಗ | ನಿರ್ಣಯ | ಕ್ರಮಕೈಗೊಂಡ ಕುರಿತು |
|---|---|---|---|---|
| 1) | 2023–24ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಸಂಬಂಧಿಸಿದಂತೆ UUCMS ತಂತ್ರಾಂಶದಲ್ಲಿ ಸರ್ಕಾರದ ಮಾನದಂಡಗಳನ್ವಯ ಸ್ಥಾನಿಕ ತನಿಖಾ ಸಮಿತಿಗಳು ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ಸಲ್ಲಿಸಿದ ವರದಿಗಳನ್ನು ವಿದ್ಯಾವಿಷಯಕ್ ಪರಿಷತ್ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಆಡಳಿತ ಮಂಡಳಿಯ ಸಭೆಯ ಮುಂದೆ ಮಂಡಿಸಲಾಗಿದೆ. | ಸಿಡಿಸಿ ವಿಭಾಗ | ದಿನಾಂಕ: 13–06–2023 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ಕಲಂ ನಂ.01 ರಲ್ಲಿ ಕೈಗೊಂಡ ನಿರ್ಣಯಗಳನ್ನು ಸಿಂಡಿಕೇಟ ಸಭೆಯಲ್ಲಿ ಚರ್ಚಿಸಿ ಅನುಮೋದಿಸಲಾಯಿತು.<br>1. 2023–24ನೇ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ ಮುಂದುವರಿಕೆ/ವಿಸ್ತರಣೆ/ಶಾಶ್ವತ ಸಂಯೋಜನೆ/ನವೀಕರಣ/ವೃತ್ತಿಪರ ಪದವಿ ಹೊರತುಪಡಿಸಿ ವಿದ್ಯಾರ್ಥಿಗಳ ಪ್ರವೇಶ ಮಿತಿ ಹೆಚ್ಚಳಕ್ಕಾಗಿ ಸಲ್ಲಿಸಿದ ಅನುಬಂಧ (A) ಯಲ್ಲಿ ತೋರಿಸಿದ ಮಹಾವಿದ್ಯಾಲಯಗಳಿಗೆ ಸರ್ಕಾರದ ಮಾನದಂಡಗಳನ್ವಯ ಅಂಕಗಳು ಬಂದಿರುವುದನ್ನು ಪರಿಗಣಿಸಿ, ಅಧಿಸೂಚನೆ/ಷರತ್ತುಬದ್ಧ ಅಧಿಸೂಚನೆ ನೀಡಲು ನಿರ್ಣಯಿಸಲಾಯಿತು.<br>2. ಅನುಬಂಧ (B, C, D, E, F, G) ದಲ್ಲಿ ತೋರಿಸಲಾದ ಅರ್ಜಿಗಳ ಕುರಿತಂತೆ ಸರ್ಕಾರದ ಮಾನದಂಡಗಳನ್ವಯ ಅಂಕಗಳು ಬಂದಿರುವುದನ್ನು ಪರಿಗಣಿಸಿ, ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಕಳುಹಿಸಲು ನಿರ್ಣಯಿಸಲಾಯಿತು.'<br>**3.** ಅನುಬಂಧ (H) ದಲ್ಲಿ ತೋರಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ ಇಡಿ 384 ಯುಎನ್ಇ 2020 ಬೆಂಗಳೂರು ದಿನಾಂಕ: 30–12–2020 ರ ಪ್ರಕಾರ ರಾಜ್ಯದ ವಿವಿಧ ಸರ್ಕಾರಿ ಮಹಾವಿದ್ಯಾಲಯಗಳಲ್ಲಿ ಹೆಚ್ಚುವರಿ ಕೋರ್ಸಗಳನ್ನು ಹಾಗೂ ಸ್ನಾತಕೋತ್ತರ ಕೋರ್ಸ/ಪದವಿಗಳನ್ನು ಪ್ರಾರಂಭಿಸಲು ಉನ್ನತ ಶಿಕ್ಷಣ ಇಲಾಖೆ/ಕಾಲೇಜು ಶಿಕ್ಷಣ ಇಲಾಖೆ ಇವರ ಅನುಮತಿ ಅಗತ್ಯವಿರುವುದರಿಂದ, ಅನುಮತಿ ಇಲ್ಲದೇ ಪ್ರಸ್ತಾವನೆಗಳನ್ನು ಸಲ್ಲಿಸಿರುವುದರಿಂದ ಸದರಿ ಪ್ರಸ್ತಾವನೆಗಳನ್ನು ಪರಿಗಣಿಸದಿರುವ ಕುರಿತು ನಿರ್ಣಯಿಸಲಾಯಿತು. | ಸಿಂಡಿಕೇಟ ನಿರ್ಣಯದಂತೆ, ಪತ್ರ ಸಂಖ್ಯೆ 776 ದಿನಾಂಕ 13–06–2023 ರ ಮೂಲಕ್ಕೆ ವಿದ್ಯಾವಿಷಯಕ್ ಪರಿಷತ್ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಆಡಳಿತ ಮಂಡಳಿಯಲ್ಲಿ ಅನುಮೋದನೆ ಪಡೆದು ಅದರಂತೆ ಮಹಾವಿದ್ಯಾಲಯಗಳಿಗೆ ಅಧಿಸೂಚನೆ ನೀಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಕ್ರಮ ಕೈಗೊಳ್ಳಲಾಗಿದೆ. |
| 2) | 2023–24ನೇ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ UUCMS ತಂತ್ರಾಂಶದಲ್ಲಿ ಸಂಯೋಜನೆಗಾಗಿ ಪ್ರಸ್ತಾವನೆ ಸಲ್ಲಿಸುವ ಮಹಾವಿದ್ಯಾಲಯಗಳಿಗೆ ಶುಲ್ಕ/ ಸೆಕ್ಷನ್‌ಗಳನ್ನು ನಿಗದಿಗೊಳಿಸುವ ಕುರಿತು. | ಸಿಡಿಸಿ ವಿಭಾಗ | 2023–24ನೇ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ UUCMS ತಂತ್ರಾಂಶದಲ್ಲಿ ಸಂಯೋಜನೆಗಾಗಿ ಪ್ರಸ್ತಾವನೆ ಸಲ್ಲಿಸುವ ಪದವಿ ಮಹಾವಿದ್ಯಾಲಯಗಳ ಸಂಯೋಜನಾವಧಿಯಲ್ಲಿ ಸ್ನಾತಕ/ ಸ್ನಾತಕೋತ್ತರ ಪದವಿಗಳ ಪ್ರವೇಶ ಮಿತಿಯನ್ನು ವಿಭಾಗವಾರು ವಿಂಗಡಿಸುವುದು ಮತ್ತು ಶುಲ್ಕವನ್ನು ವಿಭಾಗವಾರು ಆಕರಿಸಲು ಕೈಗೊಂಡ ಕ್ರಮವನ್ನು ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಯ ಶಿಫಾರಸ್ಸನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು. | ಸಿಂಡಿಕೇಟ ನಿರ್ಣಯದಂತೆ ಪ್ರವೇಶ ಮಿತಿಯನ್ನು ವಿಭಾಗವಾರು ವಿಂಗಡಿಸಲಾಗಿದೆ ಹಾಗೂ ಶುಲ್ಕವನ್ನು ಆಕರಿಸಲು ಕ್ರಮ ಕೈಗೊಳ್ಳಲಾಗಿದೆ. |
| 3) | ಕರ್ನಾಟಕ ವಿಶ್ವವಿದ್ಯಾಲಯದ ಸಂಯೋಜನೆಗೆ ಒಳಪಟ್ಟ ಆಯ್.ಬಿ.ಎಮ್.ಆರ್. ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿಗೆ | ಸಿಡಿಸಿ ವಿಭಾಗ | ಕರ್ನಾಟಕ ವಿಶ್ವವಿದ್ಯಾಲಯದ ಸಂಯೋಜನೆಗೆ ಒಳಪಟ್ಟ ಆಯ್.ಬಿ.ಎಮ್.ಆರ್. ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿ, ಬಿ.ಎಡ್. ಕೋರ್ಸಗೆ 2022–23ನೇ ಸಾಲಿನಿಂದ ಮುಂದುವರಿಕೆ ಸಂಯೋಜನೆ ನೀಡುವ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯ ಶಿಫಾರಸ್ಸನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು. . | ಸಿಂಡಿಕೇಟ ನಿರ್ಣಯದಂತೆ ಪತ್ರ ಸಂಖ್ಯೆ 193 ದಿನಾಂಕ 18.07.2023 ರ ಮೂಲಕ ಆಯ್.ಬಿ.ಎಮ್.ಆರ್. ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿ |

<table>
<tr><td></td><td>ಬಿ.ಎಡ್. ಕೋರ್ಸಗೆ 2022–23ನೇ ಸಾಲಿನಿಂದ ಮುಂದುವರಿಕೆ ಸಂಯೋಜನೆ ನೀಡುವ ಕುರಿತು.</td><td></td><td></td><td>ಇವರಿಗೆ ಬಿ.ಎಡ್. ಕೋರ್ಸಗೆ 2022–23ನೇ ಸಾಲಿನಿಂದ ಮುಂದುವರಿಕೆ ಸಂಯೋಜನೆ ನೀಡುವ ಕುರಿತು ಅಧಿಸೂಚನೆಯನ್ನು ಹೊರಡಿಸಿ ಕ್ರಮ ಕೈಗೊಳ್ಳಲಾಗಿದೆ.</td></tr>
<tr><td>4)</td><td>ಕರ್ನಾಟಕ ವಿಶ್ವವಿದ್ಯಾಲಯದ ಸಂಯೋಜನೆಗೆ ಒಳಪಟ್ಟ ಸ್ವಾಯತ್ತತೆಯ ಸಂಸ್ಥೆಯಾದ ಕೆ.ಎಲ್.ಇ. ಸಂಸ್ಥೆಯ ಪಿ.ಸಿ.ಜಾಬಿನ್ ವಿಜ್ಞಾನ ಮಹಾವಿದ್ಯಾಲಯ, ಹುಬ್ಬಳ್ಳಿಯಲ್ಲಿ ಬಿಸಿಎ ಪದವಿಗಾಗಿ ಹೆಚ್ಚುವರಿ 60 ವಿದ್ಯಾರ್ಥಿಗಳ ಪ್ರವೇಶ ಪಡೆದುಕೊಂಡಿರುವ ಕುರಿತು.</td><td>ಸಿಡಿಸಿ ವಿಭಾಗ</td><td>ಕರ್ನಾಟಕ ವಿಶ್ವವಿದ್ಯಾಲಯದ ಸಂಯೋಜನೆಗೆ ಒಳಪಟ್ಟ ಸ್ವಾಯತ್ತತೆಯ ಸಂಸ್ಥೆಯಾದ ಕೆ.ಎಲ್.ಇ. ಸಂಸ್ಥೆಯ ಪಿ.ಸಿ.ಜಾಬಿನ್ ವಿಜ್ಞಾನ ಮಹಾವಿದ್ಯಾಲಯವು 2022–23ನೇ ಸಾಲಿಗೆ ಬಿಸಿಎ ಪದವಿಗಾಗಿ ಹೆಚ್ಚುವರಿ 60 ವಿದ್ಯಾರ್ಥಿಗಳ ಪ್ರವೇಶ ಪಡೆದಿರುವುದಕ್ಕೆ ಸರಕಾರದ ಅನುಮತಿ ನೀಡಿದ್ದನ್ನು ಹಾಗೂ ನಿಯಮಾನುಸಾರ ಕರ್ನಾಟಕ ವಿಶ್ವವಿದ್ಯಾಲಯವು ಕೈಗೊಂಡಿರುವ ಕ್ರಮವನ್ನು ಪರಿಶೀಲಿಸಿ ಅನುಮೋದಿಸಲಾಯಿತು.</td><td>ಸಿಂಡಿಕೇಟ ನಿರ್ಣಯದಂತೆ ಅಧಿಸೂಚನೆ ಸಂಖ್ಯೆ 198 ದಿನಾಂಕ 20.07.2023 ರ ಮೂಲಕ ಕ್ರಮ ಕೈಗೊಳ್ಳಲಾಗಿದೆ.</td></tr>
<tr><td>5)</td><td>ಸನ್ 2023–24 ನೇ ಶೈಕ್ಷಣಿಕ ಸಾಲಿನಿಂದ ಕರ್ನಾಟಕ ಕಲಾ ಮಹಾವಿದ್ಯಾಲಯದ ಪಿ.ಯು.ಸಿ. ಪ್ರಥಮ ವರ್ಷದ ಕಲಾ ಹಾಗೂ ವಾಣಿಜ್ಯ ವಿಭಾಗಗಳಿಗೆ ಪರಿಷ್ಕೃತ ಶುಲ್ಕದೊಂದಿಗೆ ಪ್ರವೇಶ ನೀಡುವ ಕುರಿತು ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಸಿಂಡಿಕೇಟ್ ಸಭೆಯಲ್ಲಿ ದೃಢೀಕರಿಸುವ ಕುರಿತು.</td><td>ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ</td><td>ಸನ್ 2023–24 ನೇ ಶೈಕ್ಷಣಿಕ ಸಾಲಿನಿಂದ ಕರ್ನಾಟಕ ಕಲಾ ಮಹಾವಿದ್ಯಾಲಯದ ಹಾಗೂ ಕರ್ನಾಟಕ ವಾಣಿಜ್ಯ ಮಹಾವಿದ್ಯಾಲಯದ ಪಿ.ಯು.ಸಿ. ಪ್ರಥಮ ವರ್ಷದ ವಿಭಾಗಗಳಿಗೆ ಈ ಕೆಳಗಿನಂತೆ ಸಾಮಾನ್ಯ ಸೀಟುಗಳಿಗೆ ಮತ್ತು ಪರಿಷ್ಕೃತ ಶುಲ್ಕಗಳ ಅಡಿಯಲ್ಲಿ (ಒಟ್ಟು ಸೀಟುಗಳಲ್ಲಿ 30% ಸೀಟುಗಳು ಮತ್ತು ಪ್ರವೇಶ ಮಿತಿಗಿಂತ ಹೆಚ್ಚುವರಿಯಾಗಿ ಪ್ರವೇಶ ಪಡೆದ ವಿದ್ಯಾರ್ಥಿಗಳು) ಗಳಿಂದ ಶುಲ್ಕ ಆಕರಿಸಿ ಪ್ರವೇಶವನ್ನು ನೀಡಲು ಕೈಗೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ದೃಢೀಕರಿಸಿತು.
<table>
<tr><td colspan="5">ಕಲಾ ಮಹಾವಿದ್ಯಾಲಯ</td><td colspan="5">ವಾಣಿಜ್ಯ ಮಹಾವಿದ್ಯಾಲಯ</td></tr>
<tr><td rowspan="2">ಒಟ್ಟು ಸೀಟುಗಳು</td><td colspan="2">ಸಾಮಾನ್ಯ ಶುಲ್ಕ</td><td colspan="2">ಪರಿಷ್ಕೃತ ಶುಲ್ಕ</td><td rowspan="2">ಒಟ್ಟು ಸೀಟುಗಳು</td><td colspan="2">ಸಾಮಾನ್ಯ ಶುಲ್ಕ</td><td colspan="2">ಪರಿಷ್ಕೃತ ಶುಲ್ಕ</td></tr>
<tr><td>70%</td><td>ಶುಲ್ಕ ರೂ</td><td>30%</td><td>ಶುಲ್ಕ ರೂ</td><td>70%</td><td>ಶುಲ್ಕ ರೂ</td><td>30%</td><td>ಶುಲ್ಕ ರೂ</td></tr>
<tr><td>240</td><td>168</td><td>6450</td><td>72</td><td>21450</td><td>80</td><td>56</td><td>6450</td><td>24</td><td>21450</td></tr>
</table>
ಮುಂದುವರೆದು, ರೂ.15,000/– (ಕವಿವಿ ಸಾಮಾನ್ಯ ಖಾತೆಗೆ ರೂ. 7,500/– + ಪಿ.ಡಿ. ಖಾತೆಗೆ ರೂ. 7,500/–) ಹಾಗೂ ರೂ.6,450/– (ಕವಿವಿ ಸಾಮಾನ್ಯ ಖಾತೆಗೆ ರೂ. 2,340/– + ಪಿ.ಡಿ. ಖಾತೆಗೆ ರೂ. 4,110/–) ಪ್ರವೇಶ ನೀಡಿ ಶುಲ್ಕವನ್ನು ಆಕರಣೆ ಮಾಡಲು ನಿರ್ಣಯಿಸಿತು.</td><td>ಸಿಂಡಿಕೇಟ್ ನಿರ್ಣಯದಂತೆ, ಸದರ ವಿಷಯವಾಗಿ ಕ್ರಮ ಕೈಗೊಳ್ಳಲಾಗಿದೆ.</td></tr>
</table>

<table>
<tr>
<td>6)</td>
<td>ಸನ್ 2023–24 ನೇ ಶೈಕ್ಷಣಿಕ ಸಾಲಿನಿಂದ ಕರ್ನಾಟಕ ಕಲಾ ಮಹಾವಿದ್ಯಾಲಯದ ಪಿ.ಯು.ಸಿ. ದ್ವಿತೀಯ ವರ್ಷದ ಕಲಾ ಹಾಗೂ ವಾಣಿಜ್ಯ ವಿಭಾಗಗಳಿಗೆ ಕಾಲೇಜು ಬದಲಾವಣೆ ವಿದ್ಯಾರ್ಥಿಗಳಿಂದ ಪರಿಷ್ಕೃತ ಶುಲ್ಕ ಆಕರಣೆ ಮಾಡುವ ಕುರಿತು ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಸಿಂಡಿಕೇಟ್ ಸಭೆಯು ದೃಢೀಕರಿಸುವ ಕುರಿತು.</td>
<td>ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ</td>
<td>ಸನ್ 2023–24 ನೇ ಶೈಕ್ಷಣಿಕ ಸಾಲಿನಿಂದ ಕರ್ನಾಟಕ ಕಲಾ ಮಹಾವಿದ್ಯಾಲಯದ ಪಿ.ಯು.ಸಿ. ದ್ವಿತೀಯ ವರ್ಷದ ಕಲಾ ಹಾಗೂ ವಾಣಿಜ್ಯ ವಿಭಾಗಗಳಿಗೆ ಕಾಲೇಜು ಬದಲಾವಣೆಗಾಗಿ ವಿದ್ಯಾರ್ಥಿಗಳಿಂದ ಈ ಕೆಳಕಂಡಂತೆ ಪರಿಷ್ಕೃತ ಶುಲ್ಕ ಆಕರಣೆ ಮಾಡುವ ಕುರಿತು ಶುಲ್ಕ ಪರಿಷ್ಕರಣಾ ಸಮಿತಿಯ ಶಿಫಾರಸ್ಸಿನಂತೆ ಕೈಗೊಂಡ ಕ್ರಮವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ದೃಢೀಕರಿಸಿತು.
<table>
<tr><th>ಸಾಮಾನ್ಯ ಶುಲ್ಕ (ಕವಿವಿ ಸಾಮಾನ್ಯ ಖಾತೆಗೆ) ರೂ.</th><th>ಸಾಮಾನ್ಯ ಶುಲ್ಕ (ಪಿ.ಡಿ. ಖಾತೆಗೆ) ರೂ.</th><th>ಒಟ್ಟು ಸಾಮಾನ್ಯ ಶುಲ್ಕ ರೂ. (ಅ)</th><th>ಪರಿಷ್ಕೃತ ಶುಲ್ಕ (ಕವಿವಿ ಸಾಮಾನ್ಯ ಖಾತೆಗೆ) ರೂ.</th><th>ಪರಿಷ್ಕೃತ ಶುಲ್ಕ (ಪಿ.ಡಿ ಖಾತೆಗೆ) ರೂ.</th><th>ಒಟ್ಟು ಪರಿಷ್ಕೃತ ಶುಲ್ಕ ರೂ. (ಬ)</th><th>ಒಟ್ಟು ಪರಿಷ್ಕೃತ ಶುಲ್ಕ ರೂ. (ಅ) + (ಬ)</th></tr>
<tr><td>2,340/–</td><td>4,110/–</td><td>6,450/–</td><td>10,000/–</td><td>5,000/–</td><td>15,000/–</td><td>21,450/–</td></tr>
</table>
</td>
<td>ಸಿಂಡಿಕೇಟ್ ನಿರ್ಣಯದಂತೆ, ಸದರ ವಿಷಯವಾಗಿ ಕ್ರಮ ಕೈಗೊಳ್ಳಲಾಗಿದೆ.</td>
</tr>
<tr>
<td>7)</td>
<td>ಸನ್ 2023–24 ನೇ ಶೈಕ್ಷಣಿಕ ಸಾಲಿನಿಂದ ಕರ್ನಾಟಕ ಕಲಾ ಮಹಾವಿದ್ಯಾಲಯದ ದ್ವಿತೀಯ ವರ್ಷದ ಪದವಿ ತರಗತಿಗಳಿಗೆ ಕಾಲೇಜು ಬದಲಾವಣೆ ವಿದ್ಯಾರ್ಥಿಗಳಿಂದ ಪರಿಷ್ಕೃತ ಶುಲ್ಕ ಆಕರಣೆ ಮಾಡುವ ಕುರಿತು ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಸಿಂಡಿಕೇಟ್ ಸಭೆಯು ದೃಢೀಕರಿಸುವ ಕುರಿತು.</td>
<td>ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ</td>
<td>ಸನ್ 2023–24 ನೇ ಶೈಕ್ಷಣಿಕ ಸಾಲಿನಿಂದ ಕರ್ನಾಟಕ ಕಲಾ ಮಹಾವಿದ್ಯಾಲಯದ ದ್ವಿತೀಯ ವರ್ಷದ ಎಲ್ಲ (ಬಿ.ಎ., ಬಿ.ಕಾಂ., ಬಿ.ಬಿ.ಎ., ಬಿ.ಎಸ್.ಡಬ್ಲೂ., ಬಿ.ಕಾಂ.(ಸಿ.ಎಸ್), ಬಿ.ಟಿ.ಟಿ.ಎಮ್., ಬಿ.ಎಸ್.ಸಿ. ಹೋಟಲ್ ಮ್ಯಾನೇಜಮೆಂಟ್ ಹಾಗೂ ಇತರೆ) ಪದವಿ ತರಗತಿಗಳಿಗೆ ಕಾಲೇಜು ಬದಲಾವಣೆ ಬಯಸಿ ಕರ್ನಾಟಕ ಕಲಾ ಮಹಾವಿದ್ಯಾಲಯಕ್ಕೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಸಾಮಾನ್ಯ ಪ್ರವೇಶ ಶುಲ್ಕದೊಂದಿಗೆ ಪರಿಷ್ಕೃತ ಶುಲ್ಕ ರೂ.15,000/– ಗಳನ್ನು ಸೇರಿಸಿ ಪ್ರವೇಶ ಪಡೆಯಲು ಶುಲ್ಕ ಪರಿಷ್ಕರಣಾ ಸಮಿತಿಯ ಶಿಫಾರಸ್ಸಿನಂತೆ ಕೈಗೊಂಡ ಕ್ರಮವನ್ನು ಸಿಂಡಿಕೇಟ್ ಸಭೆಯು ದೃಢೀಕರಿಸಿತು.</td>
<td>ಸಿಂಡಿಕೇಟ್ ನಿರ್ಣಯದಂತೆ, ಸದರ ವಿಷಯವಾಗಿ ಕ್ರಮ ಕೈಗೊಳ್ಳಲಾಗಿದೆ.</td>
</tr>
<tr>
<td>8)</td>
<td>ಶ್ರೀಮತಿ. ಎಸ್. ಎಸ್. ಬಡಿಗಣ್ಣವರ, ತಾಂತ್ರಿಕ ಸಹಾಯಕರು, ಸ್ನಾತಕೋತ್ತರ ಮನೋವಿಜ್ಞಾನ ವಿಭಾಗ, ಕವಿವಿ ಧಾರವಾಡ ಇವರಿಗೆ ಜೂನ್ ಅಥವಾ ಜುಲೈ ತಿಂಗಳಿನಲ್ಲಿ 2 ತಿಂಗಳುಗಳ ಕಾಲ ವಿದೇಶ ಪ್ರಯಾಣ ಕೈಗೊಳ್ಳಲು ಅನುಮತಿ ನೀಡುವ ವಿಷಯವಾಗಿ ಸಿಂಡಿಕೇಟ್ ಸಭೆಯ</td>
<td>ಸಿಆಸು (ಶಿಕ್ಷಕ) ವಿಭಾಗ</td>
<td>ಶ್ರೀಮತಿ. ಎಸ್. ಎಸ್. ಬಡಿಗಣ್ಣವರ, ತಾಂತ್ರಿಕ ಸಹಾಯಕರು, ಸ್ನಾತಕೋತ್ತರ ಮನೋವಿಜ್ಞಾನ ವಿಭಾಗ, ಕವಿವಿ ಧಾರವಾಡ ಇವರಿಗೆ ಜೂನ್ ಅಥವಾ ಜುಲೈ ತಿಂಗಳಿನಲ್ಲಿ 2 ತಿಂಗಳುಗಳ ಕಾಲ ವಿದೇಶ ಪ್ರಯಾಣ ಕೈಗೊಳ್ಳಲು ಅನುಮತಿ ನೀಡುವ ವಿಷಯವಾಗಿ ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಈ ಬಗ್ಗೆ ವಿಶ್ವದ್ಯಾಲಯದಿಂದ ಯಾವುದೇ ಹಣಕಾಸಿನ ಸೌಲಭ್ಯವಿಲ್ಲದೇ, ಅವರ ಖಾತೆಯಲ್ಲಿ ಇರುವ ರಜೆಗಳ ಲಭ್ಯತೆಯ ಅನುಗುಣವಾಗಿ ಹಾಗೂ ವಿಶ್ವವಿದ್ಯಾಲಯದ ನಿಯಮಾವಳಿಗಳ ಅನುಸಾರ ಸದರೀಯವರಿಗೆ ಜೂನ್ ಅಥವಾ ಜುಲೈ ತಿಂಗಳಿನಲ್ಲಿ ವಿದೇಶ ಪ್ರಯಾಣ ಕೈಗೊಳ್ಳಲು ಅನುಮತಿ ನೀಡಲು ಠರಾಯಿಸಿತು.</td>
<td>ಸಿಂಡಿಕೇಟ್ ನಿರ್ಣಯದಂತೆ, ಕಚೇರಿ ಪತ್ರ ಸಂಖ್ಯೆ: 555 ದಿನಾಂಕ. 17.06.2023ರ ಪ್ರಕಾರ 2023ನೇ ಸಾಲಿನ ಜೂನ್ ಅಥವಾ ಜುಲೈ ತಿಂಗಳಿನಲ್ಲಿ ವಿದೇಶ ಪ್ರಯಾಣ ಕೈಗೊಳ್ಳಲು ಅನುಮತಿ ನೀಡಲಾಗಿದೆ ಹಾಗೂ ಸದರಿಯವರಿಗೆ ಈ ಕಚೇರಿ ಪತ್ರ ನಂ: 788 ದಿನಾಂಕ.</td>
</tr>
</table>

| | | | | |
|---|---|---|---|---|
| | ಪರಿಶೀಲನೆಗಾಗಿ ಮಂಡಿಸುವ ಕುರಿತು | | | 14.07.2023ರ ಪ್ರಕಾರ ದಿನಾಂಕ 10.07.2023 ರಿಂದ 29.07.2023ರ ವರೆಗೆ 20 ದಿನಗಳ ಪರಿವರ್ತಿತ ರಜೆಯನ್ನು ಹಾಗೂ ದಿನಾಂಕ 30.07.2023 ರಿಂದ 07.09.2023ರ ವರೆಗೆ 40 ದಿನಗಳ ಗಳಿಕೆ ರಜೆಯನ್ನು ಮಂಜೂರು ಮಾಡಿ ಕ್ರಮ ಕೈಗೊಳ್ಳಲಾಗಿದೆ. |
| | **ಅಧ್ಯಕ್ಷರ ಅಪ್ಪಣೆ ಮೇರೆಗೆ ಬಂದ ವಿಷಯ** | | | |
| 9) | ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗೃಹರಕ್ಷಕರ ನಿಯೋಜನೆ ಕುರಿತು. | ಸಾಮಾನ್ಯ ಆಡಳಿತ ವಿಭಾಗ | ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗೃಹರಕ್ಷಕರ ನಿಯೋಜನೆಯ ಕುರಿತು ಆರಕ್ಷಕ ಮಹಾ ನಿರ್ದೇಶಕರು, ಗೃಹರಕ್ಷಕ ದಳದ ಮಹಾ ಸಮಾದೇಷ್ಟರು ಮತ್ತು ನಿರ್ದೇಶಕರು, ಪೌರರಕ್ಷಣಾ ನಿರ್ದೇಶಕರು, ಬೆಂಗಳೂರು ಇವರ ಪತ್ರ ಸಂಖ್ಯೆ: ಆಡಳಿತ(2)03/ಸಿಜಿಒ/23–24 ದಿನಾಂಕ.06.06.2023 ರಲ್ಲಿ ಸೂಚಿಸಿರುವಂತಹ ಷರತ್ತುಗಳನ್ನು ಪರಿಶೀಲಿಸಲಾಗಿ ಏಜೇನ್ಸಿಗಳ ಮೂಲಕ ಇ-ಟೆಂಡರ ಕರೆದು ಸೆಕ್ಯೂರಿಟಿ ಸೇವೆಯನ್ನು ಪಡೆಯಲು ಸಿಂಡಿಕೇಟ ಒಮ್ಮತದಿಂದ ಒಪ್ಪಿಗೆಯನ್ನು ಸೂಚಿಸಿತು. | ಸಿಂಡಿಕೇಟ್ ನಿರ್ಣಯದಂತೆ, ಭದ್ರತಾ ಸೇವೆಯನ್ನು ಪಡೆಯಲು ಪತ್ರ ಸಂಖ್ಯೆ: 277 ದಿನಾಂಕ. 25.07.2023ರ ಮೂಲಕ ಇ–ಟೆಂಡರ (ಇ–ಪ್ರೊಕ್ಯೂರಮೆಂಟ್ ಮುಖಾಂತರ) ಟೆಂಡರ ಅಧಿಸೂಚನೆ ಹೊರಡಿಸಿ ಕ್ರಮ ಕೈಗೊಳ್ಳಲಾಗಿದೆ. |

**ಸಹಿ ಇದೆ/–**
**ಉಪ ಕುಲಸಚಿವರು**

**ಸಹಿ ಇದೆ/–**
**ಕುಲಸಚಿವರು**